ಹೆಂಡತಿಯ ಹುಚ್ಚು ನೋಡಿ ನಗುಬರುತ್ತಿತ್ತು. ಮಕ್ಕಳ ಕಾನ್ವೆಂಟ್ ಶಿಕ್ಷಣಕ್ಕೆ ಗಂಡನ ಸಂಪಾದನೆ ಸಾಕಾಗುವುದಿಲ್ಲ ಎಂದು ಹೇಳಿ, ಗಂಡನನ್ನು ಒಪ್ಪಿಸಿಯೇ ಸಹನಾ ಬಾನು ನಾಲ್ಕು ಮನೆಗಳ ಮನೆಗೆಲಸ ಒಪ್ಪಿಕೊಂಡಿದ್ದಳು.

ಆಕೆ 'ನೀವು ನನ್ನ ಹಾಗೆ ಆಗಬೇಡಿ' ಎಂದು ಮಕ್ಕಳಿಗೆ ಉಪದೇಶಿಸಿದಾಗೆಲ್ಲಾ 'ಅಮ್ಮನ ಹಾಗೆ ಸಾಬಿಯ ಹಿಂದೆ ಓಡಿಹೋಗಿ ಹಾಳಾಗಬೇಡಿ ಎಂದು ಉಪದೇಶಿಸುತ್ತಿದ್ದೀಯಾ?' ಎಂದು ಕುರೇಷಿ ನಡುವೆ ಬಾಯಿ ಹಾಕುತ್ತಿದ್ದ.

'ಛೆ ಛೆ ಹಾಗೆಲ್ಲ ಹೇಳಬೇಡಿ. ನೀವು ಕೊಟ್ಟಷ್ಟು ಪ್ರೀತಿ ವಿಶ್ವಾಸವನ್ನು ನನಗೆ ಬೇರೆ ಯಾರು ತಾನೆ ಕೊಟ್ಟಾರು?. ನಿಮ್ಮನ್ನು ಈಗ, ಇಷ್ಟು ವರ್ಷಗಳ ನಂತರ ದೂಷಿಸಿದರೆ ದೇವರು ಮೆಚ್ಚಲಿಕ್ಕಿಲ್ಲ' ಎಂದಾಕೆ ಆತನ ಬಾಯಿ ಮುಚ್ಚಿಸಲೆತ್ನಿಸಿದರೆ, ಆತ ನಕ್ಕು, 'ಸೀರಿಯಲ್ ನೋಡಿ ನೋಡಿ ನೀನು ಮಾತಾಡುವುದೆಲ್ಲಾ ಯಾರೋ ಬರೆದುಕೊಟ್ಟ ಡೈಲಾಗುಗಳ ಹಾಗಿವೆ' ಎನ್ನುತ್ತಿದ್ದ.

ಆಕೆ ಸಿಟ್ಟುಮಾಡಿಕೊಂಡರೆ, ಆತ ಆಕೆಯನ್ನು ಸಮಾಧಾನಪಡಿಸಿ, 'ನಿನ್ನ ಸೀರಿಯಲ್ಲುಗಳಲ್ಲಿ ಯಾರೂ ಪ್ರೀತಿ ಪ್ರೇಮ ಇಷ್ಟೇ ಸಾಕಾಗುವುದಿಲ್ಲ. ಹೊಟ್ಟೆಪಾಡಿನ ಗತಿಯೇನು? ಅಂತ ಕೇಳುವುದಿಲ್ಲವೆ?' ಎನ್ನುತ್ತಿದ್ದ.



ಸೀರಿಯಲ್ಲುಗಳಲ್ಲಿ ಅಂತಹ ಡೈಲಾಗುಗಳು ಇರುತ್ತಿದ್ದವೋ ಇಲ್ಲವೋ; ಆದರೆ ಆಗೀಗ ಭೇಟಿಯಾಗುತ್ತಿದ್ದ ಹಿಂದಿನ ಶಾಲಾ ಗೆಳತಿಯರೊಂದಿಗೆ ಮಾತನಾಡುತ್ತಿದ್ದಾಗ ಇಂತಹ ಮಾತುಗಳು ಬಂದುಹೋಗುತ್ತಿದ್ದವು. ಆ ದಿನಗಳಲ್ಲಿ ಗಂಡನ ಸಂಪಾದನೆಯೊಂದೇ ಮನೆ ಖರ್ಚಿಗೆ, ಮಕ್ಕಳ ಖರ್ಚಿಗೆ ಸಾಕಾಗುವುದಿಲ್ಲ ಎಂಬ ಯೋಚನೆಯಲ್ಲಿದ್ದವಳಿಗೆ, ಅನಾರೋಗ್ಯ ಪೀಡಿತೆಯಾಗಿದ್ದ ಗೆಳತಿಯೊಬ್ಬಳು, 'ಮನೆ ಕೆಲಸಕ್ಕೆ ಮತ್ತು ಡೊಮೆಸ್ಟಿಕ್ ಅಸಿಸ್ಟೆನ್ಸಿಗೆ ನಂಬಿಗಸ್ಥರು ಬೇಕಿತ್ತು. ಯಾರಾದರೂ ಗೊತ್ತಿದ್ದರೆ ಹೇಳ್ತೀಯಾ?' ಎಂದಾಗ ತಟ್ಟನೆ, ತಾನೇ ಯಾಕೆ ಈ ಕೆಲಸ ಮಾಡಬಾರದು ಅನಿಸಿತು. 'ನಾನೇ ಬರಲೇ?' ಎಂದು ಕೇಳಿಕೊಂಡಳು. ಆಕೆ ಒಪ್ಪಿದ್ದು ಮಾತ್ರವಲ್ಲ, ತನ್ನ ಗುರುತಿನವರ ಮೂರು ಮನೆಗಳ ಕೆಲಸವನ್ನೂ ಕೊಡಿಸಿದಳು. ಅದು, ಇದು ಎಂದೇನೂ ಇಲ್ಲ. ಅವರಿಗೆ ಬೇಕಾದ್ದನ್ನು ಅವರೇ ಹೇಳಿಯೋ, ತಾನೇ ಯೋಚಿಸಿಯೋ ಮಾಡಿಕೊಡುವುದು, ಅವರಿಗೆ ನಂಬಿಗಸ್ತರಾಗಿ ಉಳಿದುಕೊಳ್ಳುವುದು – ಇಷ್ಟೂ ಸಹನಾಳ ಕೆಲಸವಾಯಿತು.

***

ಕುರೇಷಿಯ ಪರಿಚಯವಾದಾಗ ಆಕೆ ಎಸ್ಸೆಸ್ಸೆಲ್ಸಿಯಲ್ಲಿದ್ದಳು.

ಸಹನಾಳ ಅಮ್ಮ ಯಾವುದೋ ಜೀವ ತಿನ್ನುವ ಕಾಯಿಲೆಗೆ ಮದ್ದು ಮಾಡುತ್ತಿದ್ದಳು. ವಾರಕ್ಕೊಮ್ಮೆ ಆಕೆ ಆಸ್ಪತ್ರೆಗೆ ಹೋಗುತ್ತಿದ್ದುದು ಕುರೇಷಿಯ ಆಟೊದಲ್ಲಿಯೇ. ಕರೆದಕೂಡಲೇ ಬರುತ್ತಿದ್ದ ಎಂಬ ಕಾರಣಕ್ಕೆ ಆತನನ್ನೇ ಕರೆಯುತ್ತಿದ್ದುದು. ಆತ ತಂದೆ ತಾಯಿಯರಿಲ್ಲದ ತಬ್ಬಲಿ ಎಂದು ತಿಳಿದಮೇಲಂತೂ ಅಮ್ಮ ಆತನಿಗೆ ಸ್ವಲ್ಪ ಹೆಚ್ಚೇ ಅನ್ನಿಸುವಷ್ಟು ಉಪಚಾರ ಮಾಡುತ್ತಿದ್ದರು. ಖುರೇಷಿ ಈ ಕುಟುಂಬದ ಭಾಗ ಎಂಬಷ್ಟು ಹತ್ತಿರವಾದದ್ದು ಹೀಗೆ. ಅಮ್ಮ ಸತ್ತುಹೋದದ್ದು ಆಗಲೇ. ಮೊದಲೇ ಮೌನಿಯಾಗಿದ್ದ ಅಪ್ಪ ಯಾಕೋ ಮುದುಡಿಹೋಗಿಬಿಟ್ಟರು. ಅವರೇ ಏನೋ ಬೇಯಿಸಿಟ್ಟು ತಮ್ಮ ಕೆಲಸಕ್ಕೆ ಹೋಗುತ್ತಿದ್ದರು. ಎಲ್ಲದಕ್ಕೂ ಅಮ್ಮನನ್ನೇ ನೆಚ್ಚಿಕೊಂಡಿದ್ದ, ಶತ ಸೋಮಾರಿ ಎಂದು ಅಮ್ಮನಿಂದ ಬೈಸಿಕೊಂಡು ಖುಷಿಪಡುತ್ತಿದ್ದ ಸಹನಾ ಮಾನಸಿಕವಾಗಿ ಇಂತಹ ಪರಿಸ್ಥಿತಿಗೆ ಸಿದ್ಧಳಿರಲಿಲ್ಲ. ಆ ಕ್ಷಣ ಅವಳಿಗೆ ಆಧಾರಕ್ಕೆ ಒಂದು ಜೀವ ಬೇಕಿತ್ತು. ಕುರೇಷಿ ಆ ಜೀವ ಆದದ್ದು ಆಕಸ್ಮಿಕವೇನಲ್ಲ. ಆ ವರ್ಷ ಎಸ್ಸೆಸ್ಸೆಲ್ಸಿಯಲ್ಲಿ ಸಹನಾ ಫೇಲ್ ಆದಳು.

'ಮುಂದೇನು ಮಾಡ್ತೀಯಾ ಮಗಳೆ' ಎಂದು ಅಪ್ಪ ಕೇಳಿದಾಗ, 'ನಾನು ಕುರೇಷಿಯನ್ನು ಮದುವೆ ಆಗ್ತೀನಿ' ಎಂದುಬಿಟ್ಟಳು.

'ಇದು ತಪ್ಪು. ನೀನು ಸುಖವಾಗಿರೋದಿಲ್ಲ' ಎಂದು ಸಾರಿಸಾರಿ ಹೇಳಿದರೂ ಸಹನಾ ಕೇಳಲಿಲ್ಲ.

'ನಿನ್ನ ಮತಾಂತರ ಮಾಡ್ತಾನೆ. ಇಷ್ಟು ದಿನ ಈ ನಂಬಿಕೆಗಳನ್ನು ಬೆಳೆಸಿಕೊಂಡವಳಿಗೆ ಇನ್ನೊಂದು ಧರ್ಮ ಒಪ್ಪಿಗೆ ಆಗೋದು ಕಷ್ಟ' ಎಂದರು.

'ಮತಾಂತರ ಇಲ್ಲ, ಏನೂ ಇಲ್ಲ. ಆಕೆ ಸಹನಾ ಆಗಿಯೇ ಉಳೀತಾಳೆ. ನಾನು ಕುರೇಷಿಯಾಗಿಯೇ ಉಳೀತೇನೆ. ಆಕೆ ಹೀಗೇ ಇರ್ತಾಳೆ. ಶ್ರೀಮಂತರ ಜಗತ್ತಿನ ನಿಯಮಗಳು ನಮಗೆ ಅನ್ವಯಿಸುವುದಿಲ್ಲ. ನಾವು ಬಡವರು. ಹೀಗೇ ಇರ್ತೇವೆ. ಕಷ್ಟದಲ್ಲಿ ನೆನಪು ಮಾಡಿಕೊಳ್ಳಲಿಕ್ಕೆ ನನ್ನ ದೇವರು ನನಗೆ; ಅವಳ ದೇವರು ಅವಳಿಗೆ. ಒಬ್ಬರ ನಂಬಿಕೆ ಇನ್ನೊಬ್ಬರ ಮೇಲೆ ಹೇರಬಾರದು ಅಂತ ಬಡವರಿಗೆ ಗೊತ್ತಿರುತ್ತೆ' ಎಂದ ಕುರೇಷಿ.

ಅಪ್ಪ ಅತ್ತರು. ಕಾಡಿದರು. ಪೀಡಿಸಿದರು. 'ನನ್ನ ಪಾಲಿಗೆ ನೀನು ಸತ್ತಂತೆ' ಎಂದರು.

ಸಹನಾ ಕೇಳಲಿಲ್ಲ.

ಮದುವೆಯಾಯಿತು. ಯಾವ ಧರ್ಮದಂತೆಯೂ ಅಲ್ಲ. ರಿಜಿಸ್ಟರ್ಡ್ ಮದುವೆ.

ಸಹನಾ ಮತ್ತು ಕುರೇಷಿ ಹತ್ತಿರದ ನಗರಕ್ಕೆ ವಲಸೆ ಹೋದರು.

ಆಮೇಲೊಂದು ದಿನ ಕುರೇಷಿ ಆಕೆಯಲ್ಲಿ ನಿನ್ನನ್ನು ಸಹನಾಬಾನು ಎಂದು ಕರೆಯಲೆ? ಎಂದು ಕೇಳಿದ.

'ಯಾಕೆ? ಮತಾಂತರದ ಮಾತಾಡುವುದಿಲ್ಲ ಅಂತ ಹೇಳಿದ್ದು ಮರೆತೆಯಾ?'

'ಹಾಗಲ್ಲ. ನನಗೊಬ್ಬಳು ಅಮ್ಮ ಇದ್ದಿದ್ದಳು. ಅವಳನ್ನು ಎಲ್ಲಾ ಬಾನು ಅಂತ ಕರೀತಾ ಇದ್ದರು. ಬಾನು ಅಂದರೆ ಆಕಾಶ ಅಂತಲೂ ಅರ್ಥವಿದೆಯಂತೆ.'

'ಎಲ್ಲರೂ ಭೂಮಿಯಷ್ಟು ಸಹನೆ ಅಂತಾರೆ. ನಾನು ಆಕಾಶದಷ್ಟು ಸಹನೆ ಉಳ್ಳವಳು ಅಂತ ಆಗಬೇಕಿದ್ದರೆ ಆಗಲಿಬಿಡಿ.'

ಸಹನಾ ಸಹನಾಬಾನು ಆದಳು.

ಇಬ್ಬರು ಹೆಮ್ಮಕ್ಕಳೂ ಹುಟ್ಟಿದರು.

ನಾವು ಜಾತಿಯ ಒಳಗೆ ಮದುವೆಯಾದವರು ಜಗಳವಾಡುತ್ತೇವೆ; ಡೈವೋರ್ಸ್ ಕೂಡಾ ಆಗುತ್ತೆ. ನಿಮ್ಮದು ಅಂತರ್ಜಾತೀಯ ವಿವಾಹ ಮತ್ತು ನೀವಿಬ್ಬರೂ ನಿಮ್ಮನಿಮ್ಮ ಧರ್ಮವನ್ನೇ ಉಳಿಸಿಕೊಂಡು ಒಟ್ಟಿಗೆ ಬದುಕುವುದು ಹೇಗೆ ಸಾಧ್ಯವಾಗಿದೆ? ಅಂತ ಯಾರಾದರೂ ಕೇಳಿದರೆ ಸಹನಾಬಾನು, 'ಬಡವರಿಗೆ ಧರ್ಮ ಇರುವುದಿಲ್ಲ, ಇರಬಾರದು ಕೂಡಾ' ಎನ್ನುತ್ತಾಳೆ. ಆ ಹೊತ್ತಿಗೆ ಅಲ್ಲೆಲ್ಲಾದರೂ ಖುರೇಷಿ ಇದ್ದಿದ್ದರೆ 'ಹೌದು ಹೌದು' ಎಂದು ಕೋಲೆಬಸವನಂತೆ ತಲೆ ಆಡಿಸುತ್ತಾನೆ.

'ಗಂಡ ಹೆಂಡತಿ ಇಬ್ಬರಲ್ಲಿ ಒಬ್ಬರಾದರೂ ಹೀಗೆ ಕೋಲೆಬಸವನಂತೆ ಇದ್ದರೆ ಜಗಳವೂ ಆಗುವುದಿಲ್ಲ, ಡೈವೋರ್ಸೂ ಆಗುವುದಿಲ್ಲ' ಎಂದು, ಹೀಗೆ ಪ್ರಶ್ನಿಸುತ್ತಿದ್ದವರು ಗುಟ್ಟಿನಲ್ಲಿ ಮಾತಾಡಿಕೊಳ್ಳುತ್ತಿದ್ದುದನ್ನು ಸಹನಾಬಾನುವೂ ಬಲ್ಲಳು.

***

ಸಹನಾಬಾನು ಬಹಳ ಯೋಚಿಸಿದ ನಂತರ ಅಮಿತಾಭ್ ಬಚ್ಚನನಿಗೆ ಒಂದು ಸುದೀರ್ಘ ಕಾಗದವನ್ನು ಬರೆದಳು. ಅದೂ ಕನ್ನಡದಲ್ಲಿ. ಹಿಂದಿಯಲ್ಲಿ ಬರೆಯಬಹುದಿತ್ತೇನೋ. ಆದರೆ ಓದಿದ್ದೆಲ್ಲಾ ಕಳೆದ ಇಪ್ಪತ್ತು ವರ್ಷಗಳಲ್ಲಿ ಘಟ್ಟಹತ್ತಿಬಿಟ್ಟಿದೆ. ಮಕ್ಕಳ ಹತ್ತಿರ ಬರೆಸೋಣ ಎಂದರೆ ಕಾನ್ವೆಂಟಿನಲ್ಲಿ ಓದುತ್ತಿರುವ ಅವಕ್ಕೆ ಇಂಗ್ಲಿಷು ಬಿಟ್ಟು ಬೇರೇನೂ ಬರುವುದಿಲ್ಲ. ಇಂಗ್ಲಿಷಿನಲ್ಲಿ ಬರೆಸೋಣ ಎಂದರೆ ಇವು ಬರೆದದ್ದು ಅಮಿತಾಭ್ ಬಚ್ಚನನಿಗೆ ಅರ್ಥವಾಗುತ್ತದೋ ಇಲ್ಲವೋ.

ಕಾಗದ ಬರೆದರೆ ಅದು ಓದುವವರ ಎದೆ ಕಲುಕುವಂತಿರಬೇಕು. ಕಣ್ಣಲ್ಲಿ ಎರಡು ಹನಿ ನೀರಾದರೂ ತುಳುಕಬೇಕು ಎಂದುಕೊಂಡು ಸಹನಾಬಾನು ತಿದ್ದಿತಿದ್ದಿ ಕಾಗದ ಬರೆದಳು. ತಾನು ಬರೆದುದನ್ನು ಓದಿ ತನಗೇ ಕಣ್ಣೀರುಬಂದಮೇಲೆ, ಅಮಿತಾಭನಿಗೆ ಬಾರದೇಹೋದೀತೆ ಎಂದುಕೊಂಡಳು.

ಕಾಗದದ ಕೊನೆಯಲ್ಲಿ ತಾನು ಬೆಳಿಗ್ಗೆ ತುಂಬಾ ಬಿಜಿ ಇರುವುದರಿಂದ